ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೆ, ನನಗೆ ಬಂದಿರುವ ವರದಿ ಪ್ರಕಾರ ಈ ವರ್ಷದಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಪ್ರಾರಂಭ ಆಗುವುದಕ್ಕೆ ಏನೇನು ಅನುಕೂಲಗಳು ಬೇಕು ಏನೇನು ಸೌಲಭ್ಯಗಳು ಅದನ್ನೆಲ್ಲಾ ವಿಚಾರಿಸಿ ಆದಷ್ಟು ಬೇಗ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಷಫಿ ಅಹ್ಮದ್.—ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿಳ ಲಕ್ಷದ ೩ಳ ಸಾವಿರದ ೨೯೯ ಕ್ವಿಂಟಾಲ್ ಸೀಡ್ಸ್ ಪ್ರೊಕ್ಯೂರ್ ಮಾಡಿ ಇವತ್ತು ರೈತರಿಗೆ ಒದಗಿಸಿಕೊಡುತ್ತಿದ್ದಾರೆ. ಮೂಲತಃ ನಾನು ಪ್ರಶ್ನೆ ಕಳುಹಿಸಿದ್ದು ನಮ್ಮ ರಾಜ್ಯದಲ್ಲಿ ಸರಿಯಾದ ರೀಸರ್ಚ್ ಇಲ್ಲದಿರುವ ಕಾರಣದಿಂದ ರೈತರಿಗೆ ಸರಿಯಾದ ರೀತಿಯಲ್ಲಿ ಬೀಜಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಮಾನ್ಯ ಸಚಿವರು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಅದರ ಮುಖಾಂತರ ಇಂಪೀರಿಯರ್ ಕ್ವಾಲಿಟಿ ಸೀಡ್ಸ್‌ನ್ನು ರೈತರಿಗೆ ಕೊಡುತ್ತಿದ್ದಾರೆ ಅದು ಇಂಪ್ರೂವ್‌ಮೆಂಟ್ ಆಗಬೇಕು, ಅದನ್ನು ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ಸರ್ಕಾರ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದೆಯೆಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ನಮ್ಮ ಇಲಾಖೆ ಮತ್ತು ಸಂಬಂಧಪಟ್ಟ ಪರಿನಿತರ ಜೊತೆಯಲ್ಲಿ ಸಮಾಲೋಚನೆ ಮಾಡಿ ಎಷ್ಟು ಬೇಗ ಸೌಕರ್ಯಗಳನ್ನು ಒದಗಿಸುವುದಕ್ಕೆ ಸಾಧ್ಯ, ಇದನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಿಲ್ಲವೆನ್ನುವ ಪರಿಸ್ಥಿತಿಯಿದೆ. ಈ ವರ್ಷ ಮಾಡುತ್ತೇವೆಂದು ಹೇಳಿದ್ದಾರೆ ಅಷ್ಟೆ. ಪೂರ್ಣ ವಿಚಾರ ತಿಳಿದು ನಾನು ಸಭೆಗೆ ಮತ್ತು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ.

ಚುಕ್ಕಿ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ದಿನಾಂಕ ೩೧ನೇ ಮಾರ್ಚ್ ೧೯೬೪ ರ ಲಿಖಿತ ಮೂಲಕ ಉತ್ತರಿಸುವ ೧೭ನೇ ಪಟ್ಟಿಯಲ್ಲಿರುವ ೧೨ ಪ್ರಶ್ನೆಗಳ ಪೈಕಿ ಪ್ರಶ್ನೆ ಸಂಖ್ಯೆ ೭೬೨ನ್ನು ಹೊರತುಪಡಿಸಿ ಉಳಿದ ೧೧ ಚುಕ್ಕಿ ಗುರುತಿಲ್ಲದ ಪ್ರಶ್ನೆ ಮತ್ತು ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಕೇಂದ್ರ ಸರ್ಕಾರದವರು ಕೋಲಾರ ಜಿಲ್ಲೆಗೆ ೧೯೬೩-೬೪ನೇ ಸಾಲಿನಲ್ಲಿ ಉದ್ಯೋಗ ಭರವಸೆ ಯೋಜನೆಗೆ ಬಿಡುಗಡೆ ಮಾಡಿರುವ ಹಣ

೪೯೯(೮೦೩) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಕೇಂದ್ರ ಸರ್ಕಾರದವರು ಕೋಲಾರ ಜಿಲ್ಲೆಗೆ ೧೯೬೩-೬೪ನೇ ಸಾಲಿಗೆ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ಒಟ್ಟು ಹೆಚ್ಚುವರಿ ಬಿಡುಗಡೆ ಮಾಡಿದ ಹಣವೆಷ್ಟು?

(ಆ) ಪ್ರತಿ ತಾಲ್ಲೂಕಿಗೆ ವಿತರಣೆ ಮಾಡಿದ ಒಟ್ಟು ಹಣ?

(ಇ) ಯಾವ ಯಾವ ಬಾಬುಗಳಿಗೆ ಈ ಹಣವನ್ನು ಖರ್ಚು ಮಾಡಬೇಕಾಗಿರುತ್ತೆ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

(ಅ) ರೂ ೨೭೦.೦೦ ಲಕ್ಷಗಳು.

(ಆ) ಪ್ರತಿ ತಾಲ್ಲೂಕಿಗೆ ವಿತರಣೆ ಮಾಡಿದ ಹಣದ ವಿವರ ಈ ಕೆಳಕಂಡಂತಿದೆ:—

ಕ್ರಮ ಸಂಖ್ಯೆ	ತಾಲ್ಲೂಕು	ಬಿಡುಗಡೆ ಮಾಡಿದ ಹಣ (ರೂ. ಲಕ್ಷಗಳಲ್ಲಿ) (ರಾಜ್ಯ ಸರ್ಕಾರದ ವತಿಯಿಂದ ಬಿಡುಗಡೆಯಾದ ರೂ. ೬೭.೫೦ ಲಕ್ಷಗಳು ಸೇರಿ)
೧	ಕೋಲಾರ	೩೭.೫೦
೨	ಮಾಲೂರು	೩೭.೫೦
೩	ಬಂಗಾರಪೇಟೆ	೩೭.೫೦
೪	ಮುಳಬಾಗಿಲು	೩೭.೫೦

೧	೨	೩
೫	ಶ್ರೀನಿವಾಸಪುರ	೩೭.೫೦
೬	ಚಿಂತಾಮಣಿ	೩೭.೫೦
೭	ಶಿಡ್ಲಘಟ್ಟ	೩೭.೫೦
೮	ಬಾಗೇಪಲ್ಲಿ	೩೭.೫೦
೯	ಗೌಡಿಬಂಡೆ	೩೭.೫೦
	ಒಟ್ಟು	೩೩೭.೫೦ ಲಕ್ಷ ರೂ.ಗಳು

(ಇ) ೧ ಭೂಸಾರ ಸಂರಕ್ಷಣೆ ಮತ್ತು ಅರಣ್ಯೀಕರಣ ಕಾಮಗಾರಿಗಳು.

೨ ಸಣ್ಣ ನೀರಾವರಿ ಕಾಮಗಾರಿಗಳು.

೩ ಕೂಡು ರಸ್ತೆಗಳು.

೪ ಪ್ರಾಥಮಿಕ ಶಾಲೆ ಮತ್ತು ಆಂಗನವಾಡಿ ಕಟ್ಟಡಗಳ ಕೆಲಸಗಳು,

ಶಿಗ್ಗಾಂವ ತಾಲ್ಲೂಕು ಕುನ್ನೂರ ಗ್ರಾಮದಲ್ಲಿ ಮಾವಿನ ಹಣ್ಣಿನ ಸಂಶೋಧನಾ ಕೇಂದ್ರ

೫೦೦ (೭೮೪) ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ).—ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಎಷ್ಟು ಕಡೆ ತೋಟಗಾರಿಕಾ ಸಂಶೋಧನಾ ಕೇಂದ್ರ ಮತ್ತು ಮಾವಿನ ಸಂಶೋಧನಾ ಕೇಂದ್ರ ಪ್ರಾರಂಭ ಮಾಡಲಾಗಿದೆ ? (ಅವುಗಳ ವಿವರ ನೀಡುವುದು)

ಆ) ಶಿಗ್ಗಾಂವ ತಾಲ್ಲೂಕು ಕುನ್ನೂರ ಗ್ರಾಮದ ಹತ್ತಿರ ೧೫೦ ಎಕರೆ ಜಮೀನು ತೋಟಗಾರಿಕೆ ಇಲಾಖೆ ಅಥವಾ ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ ಇವರಿಗೆ ಕೊಡಲು ತಯಾರಿದ್ದು ಅಲ್ಲಿ ಮಾವಿನ ಹಣ್ಣಿನ ಸಂಶೋಧನಾ ಕೇಂದ್ರ ತೆರೆಯಲಾಗುವುದೇ ?

ಇ) ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿಪಡಿಸಲು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು).—

ಅ) ಒಟ್ಟು ೨೯ ಸಂಶೋಧನಾ ಕೇಂದ್ರಗಳು ತೋಟಗಾರಿಕೆ ಸಂಶೋಧನೆಯಲ್ಲಿ ನಿರತವಾಗಿದೆ. ೭ ಸಂಶೋಧನಾ ಕೇಂದ್ರಗಳಲ್ಲಿ ಮಾವಿನ ಸಂಶೋಧನೆ ಮಾಡಲಾಗುತ್ತಿದೆ. ವಿವರ ಅನುಬಂಧ–೧ ರಲ್ಲಿ ಲಗತ್ತಿಸಿದೆ.

ಆ) ಒಂದು ವೇಳೆ ೧೫೦ ಎಕರೆ ಜಮೀನನ್ನು ತೋಟಗಾರಿಕೆ ಇಲಾಖೆಗೆ ಬಿಟ್ಟು ಕೊಟ್ಟಲ್ಲಿ ಸಂಶೋಧನಾ ಕೇಂದ್ರ ಅಗತ್ಯತೆ ಇದೆಯೇ ಎಂಬುದನ್ನು ಪರಿಶೀಲಿಸಿ ಕೇಂದ್ರ ತೆರೆಯುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಇ) ವಿವರಗಳನ್ನು ಅನುಬಂಧ–೨ ರಲ್ಲಿ ಇಡಲಾಗಿದೆ.